# ಮಾನವನ ಕರ್ತವ್ಯಗಳು

ಇಡೀ ಮಾನವ ಜೀವನದ ಗುರಿಯೇನು, ಅವನ ಬದುಕಿಗೆ ಅರ್ಥವಿದೆಯೆ, ಜೀವನದ ಸಾರ್ಥಕ್ಯ ಯಾವುದರಿಂದ ಉಂಟಾಗುತ್ತದೆ — ಈ ಎಲ್ಲ ಪ್ರಶ್ನೆಗಳಿಗೆ ಶ್ರೀರಾಮಕೃಷ್ಣರು ಖಚಿತವಾದ ಉತ್ತರವನ್ನು ನೀಡುತ್ತಾರೆ: ''ಭಗವಂತನ ಸಾಕ್ಷಾತ್ಕಾರವೇ ಮಾನವ ಜೀವನದ ಗುರಿ.'' ಪ್ರಪಂಚದ ನಾನಾ ಪ್ರದೇಶಗಳಲ್ಲಿ, ನಾನಾ ಜನಾಂಗಗಳಲ್ಲಿ ಹುಟ್ಟಿ ಜೀವನ ನಡೆಸುತ್ತಿರುವ ಜನಸಮುದಾಯಗಳು ಒಂದೊಂದು ಆದರ್ಶವನ್ನು ತಮ್ಮ ಜೀವನದ ಗುರಿಯನ್ನಾಗಿ ಕಂಡುಕೊಂಡಿವೆ; ಅವು ಒಂದಕ್ಕಿಂತ ಇನ್ನೊಂದು ಭಿನ್ನವಾಗಿವೆ — ಇದು ಸಹಜವಾಗಿದೆ. ಆದರೆ ಅವರೆಲ್ಲ 'ಇದು ನನ್ನ ಗುರಿ', 'ಇದು ನಿನ್ನ ಗುರಿ' ಎಂದಾಗಲೀ, 'ನಮ್ಮ ದೇಶದ ಜನರ ಆದರ್ಶ, ಗುರಿ ಇದು' 'ಅವರದು ಬೇರೆ' ಎಂದಾಗಲೀ ಹೇಳಿ ವಿವರಿಸಬಹುದಾದರೂ, ಸಮಗ್ರವಾಗಿ ಮಾನವನನ್ನು ಕುರಿತು ಪ್ರಶ್ನಿಸಿದಾಗ ಈ ಮಾತುಗಳು ಅರ್ಥಹೀನವೆನಿಸುತ್ತವೆ; ಸೀಮಿತ ದೃಷ್ಟಿಯವು ಎನಿಸುತ್ತವೆ. ಒಂದು ದೇಶದ ಜನಾಂಗದ ಅಥವಾ ಸಮುದಾಯದ ಗುರಿ-ಆದರ್ಶಗಳನ್ನು ಕುರಿತು ಇಲ್ಲಿ ಆಲೋಚಿಸುತ್ತಿಲ್ಲ; ಒಟ್ಟು ಮಾನವ ಜನಾಂಗವನ್ನೇ ಒಂದಾಗಿ ಕಾಣುವಾಗ, 'ನಮ್ಮ ಗುರಿ ಏನು?' ಎಂಬ ಈ ಪ್ರಶ್ನೆಗೆ ಉತ್ತರ ಮುಖ್ಯವಾಗುತ್ತದೆ.

## ಬದುಕಿನ ಅರ್ಥವೇನು?

ಕೆಲವರು ಮಾತ್ರ ತಮ್ಮ ಬದುಕನ್ನು, ಪ್ರಪಂಚವನ್ನು ಕುರಿತು ಪ್ರಶ್ನಿಸುತ್ತಾರೆ ಹಾಗೂ ಚಿಂತಿಸುತ್ತಾರೆ. ಈ ಪ್ರಪಂಚವೇಕೆ ಅಸ್ತಿತ್ವದಲ್ಲಿದೆ? ನಾವೇಕೆ ಹುಟ್ಟಿ ಬದುಕುತ್ತಿದ್ದೇವೆ? ನಮ್ಮೆಲ್ಲರ ಹಾಗೂ ಪ್ರಪಂಚದ ಜೀವನದ ಉದ್ದೇಶವೇನು? ಯಾವ ರೀತಿಯ ಜೀವನ ನಡೆಸಿದರೆ ಅದು ಯೋಗ್ಯ ಜೀವನವೆನಿಸುವುದು? — ಈ ಎಲ್ಲ ಪ್ರಶ್ನೆಗಳಿಗೆ ಚಿಂತಕರು, ತತ್ತ್ವಜ್ಞಾನಿಗಳು ಹಾಗೂ ದಾರ್ಶನಿಕರು ಮಾತ್ರ ಚಿಂತಿಸುವುದಲ್ಲ; ಪ್ರತಿಯೊಬ್ಬನೂ ತನ್ನ ಜೀವನದ ಒಂದಲ್ಲ ಒಂದು ಹಂತದಲ್ಲಿ ಈ ಬಗೆಯ ಆಲೋಚನೆಗಳನ್ನು ಮಾಡುತ್ತಾರೆ. ಆದರೆ ಅನೇಕರು ಇಂಥ ಆಲೋಚನೆಗೆ ಪ್ರಾಮುಖ್ಯತೆ ನೀಡದೆ, ಅವನ್ನು ಬದಿಗೆ ಸರಿಸಿಬಿಡುತ್ತಾರೆ. ಕೆಲವರು ಮಾತ್ರ ಈ ಆಲೋಚನೆಗಳ ಬೆನ್ನುಹತ್ತಿ ಗಾಢವಾಗಿ ಚಿಂತಿಸುತ್ತಾರೆ; ಅರ್ಥವನ್ನು ಅರಸುತ್ತಾರೆ. ಇಂಥ 'ಮೂಲಭೂತ' ಚಿಂತಕರಲ್ಲಿ ಮೇಲಿನ ಪ್ರಶ್ನೆಗಳಿಗೆ ಯೋಗ್ಯ ಉತ್ತರವನ್ನು ಕಂಡುಕೊಂಡವರೇ ಮಹಾತ್ಮರು. ಅವರ ಮಾತುಗಳು ಲಕ್ಷಾಂತರ ಜನರಿಗೆ ಹೊಸ ಬೆಳಕನ್ನು ಕೊಡುತ್ತವೆ. ಅಲ್ಲಿಯವರೆಗೆ ಯಾರಿಗೂ ಕಾಣಿಸದಿದ್ದ ಸಂಗತಿಗಳು ಅಂಥ ಮಹಾತ್ಮರ ಮೂಲಕ ಉಳಿದವರಿಗೂ ಗೋಚರಿಸುತ್ತವೆ. ಹೀಗೆ ಒಬ್ಬ ಮಹಾತ್ಮನ ಗಾಢಚಿಂತನೆ ಇಡೀ ಸಮಾಜದ ಪರಿವರ್ತನೆಗೆ ಕಾರಣವಾಗುತ್ತದೆ. ಈ ರೀತಿಯಲ್ಲಿ ವಿಭಿನ್ನ ದೃಷ್ಟಿಕೋನದಿಂದ ಬದುಕನ್ನು ಹೊಸದಾಗಿ ಕಂಡುಕೊಂಡ ಮಹಾಪುರುಷರು ಶ್ರೀರಾಮಕೃಷ್ಣರು. ಯಾವ ತತ್ತ್ವ, ವಿಚಾರ, ಧರ್ಮ, ಸಂಪ್ರದಾಯವನ್ನೂ ವಿರೋಧಿಸದೆ, ಎಲ್ಲದರ ಸಾರವನ್ನು ಹೊಸ ದೃಷ್ಟಿಯಿಂದ ಕಂಡುಕೊಂಡು, ಮಾನವನಿಗೆ ನಿಜಕ್ಕೂ ಅಗತ್ಯವಾದ ಭವ್ಯ ಮಾರ್ಗವನ್ನು ಅವರು ತೋರಿಸಿಕೊಟ್ಟರು. ನಿಜವಾದ ಅರ್ಥದಲ್ಲಿ 'ನವಯುಗದ ಹರಿಕಾರ'ರು ಅವರು.

ಸಂಪತ್ತು, ಅಧಿಕಾರ, ಕೀರ್ತಿ, ಲೌಕಿಕ ಸುಖ, ಸಾಂಸಾರಿಕ ನೆಮ್ಮದಿ — ಇವುಗಳನ್ನು ಎಲ್ಲರೂ ಬಯಸುತ್ತಾರೆ. ಆದರೆ ಇವುಗಳಿಂದ ಮಾನವನು ಪರಿಪೂರ್ಣತೆಯನ್ನು ಕಂಡುಕೊಳ್ಳಲಾರ. ಕಾರಣ, ಈ ಪ್ರಪಂಚದಲ್ಲಿ ದೊರಕುವ ಯಾವುದೂ ಶಾಶ್ವತವಲ್ಲ. ಭಗವಂತನೊಬ್ಬನೇ ಸತ್ಯ ; ಅವನಿಂದಲೇ ಪ್ರತಿಯೊಂದೂ ಅಸ್ತಿತ್ವಕ್ಕೆ ಬಂದಿದೆ. ಆದ್ದರಿಂದ ಆತನನ್ನು ತಿಳಿದರೆ, ಅವನ ಸಾಕ್ಷಾತ್ಕಾರ ಮಾಡಿಕೊಂಡರೆ ಮಾತ್ರ ಉಳಿದ ಎಲ್ಲವಕ್ಕೂ ಅರ್ಥ ಬರುತ್ತದೆ. ಇಲ್ಲದಿದ್ದರೆ ಮಾನವನ ಬದುಕೂ ಪ್ರಪಂಚದ ಹಾಗೆ ಜಡವಾಗುತ್ತದೆ, ನಿಸ್ಸಾರವಾಗುತ್ತದೆ. ಇದು ಶ್ರೀರಾಮಕೃಷ್ಣರು ನಮಗೆ ತೋರಿಸಿಕೊಡುವ ಹೊಸ ದೃಷ್ಟಿಕೋನ. ಅಂದರೆ ಲೌಕಿಕ ಜೀವನ, ಪ್ರಪಂಚ, ಸಂಪತ್ತು ಇತ್ಯಾದಿಗಳನ್ನು ಬಿಟ್ಟುಬಿಡಬೇಕೆಂದು ಅವರು ಹೇಳುವುದಿಲ್ಲ. ಸಂನ್ಯಾಸಿಯಾದವನು ಮಾತ್ರ ದೈಹಿಕವಾಗಿಯೂ ಎಲ್ಲವನ್ನು ತ್ಯಜಿಸಬೇಕು; ಉಳಿದವರು ಪ್ರಪಂಚದಲ್ಲಿದ್ದುಕೊಂಡೇ ಭಗವಂತನನ್ನು ಕಾಣಲು ಸಾಧನೆ ಮಾಡಬೇಕು. ಒಟ್ಟಿನಲ್ಲಿ, ಭಗವಂತನ ಸಾಕ್ಷಾತ್ಕಾರ ಎಲ್ಲರ ಗುರಿ. ಅದೇ ಮಾನವನು ಮಾಡಬೇಕಾಗಿರುವ ಪ್ರಧಾನ ಕಾರ್ಯ. ಶ್ರೀರಾಮಕೃಷ್ಣರು ತಮ್ಮ ಉಪದೇಶಗಳಲ್ಲಿ ಆಗಾಗ ಒತ್ತು ನೀಡಿ ಹೇಳಿರುವ ಅಂಶವಿದು.

## ಕ್ರಿಯಾಶೀಲ ಬದುಕು

ಮಾನವ ಜೀವಿತದ ಗುರಿ ಭಗವಂತನ ಸಾಕ್ಷಾತ್ಕಾರ ನಿಜ; ಆದರೆ ಅದನ್ನು ಸಾಧಿಸುವುದು ಹೇಗೆ? ಇದಕ್ಕೆ ಶ್ರೀರಾಮಕೃಷ್ಣರು ಉಪಾಯವೇನೆಂದು ತಿಳಿಸಿಕೊಡುತ್ತಾರೆ; ''ವ್ಯಾಕುಲನಾಗಿ ಆತನ ದರ್ಶನಕ್ಕಾಗಿ ಅಳಬಲ್ಲೆಯಾ? ಜನ ಮಕ್ಕಳಿಗಾಗಿ, ಹೆಂಡತಿಗಾಗಿ, ಹಣಕ್ಕಾಗಿ ಬಿಂದಿಗೆ ತುಂಬ ಕಣ್ಣೀರು ಸುರಿಸುತ್ತಾರೆ. ಆದರೆ ಭಗವಂತನಿಗಾಗಿ ಯಾರು ಅಳುತ್ತಾರೆ? ಮಗು ಗಿಲಕಿಯಲ್ಲೇ ಮಗ್ನವಾಗಿ ತಾಯಿಯನ್ನೇ ಮರೆತಿರುವಾಗ ಆಕೆ ಅಡಿಗೆ ಮತ್ತು ಉಳಿದ ಮನೆಕೆಲಸ ಇವನ್ನೆಲ್ಲಾ ಮಾಡುತ್ತಿರುತ್ತಾಳೆ. ಯಾವಾಗ ಮಗುವಿಗೆ ಗಿಲಕೆ, ಉರಟುಗೋಲು ಯಾವುದೂ ಬೇಡವಾಗಿ, ಅವನ್ನು

ಬಿಸಾಡಿ ಚೀತ್ಕಾರ ಮಾಡುತ್ತ ಅಳಲಾರಂಬಿಸುವುದೋ, ಆಗ ತಾಯಿ ಅನ್ನದ ತಪ್ಪಲೆ ಕೆಳಗಿಳಿಸಿ ಓಡಿ ಓಡಿ ಬಂದು ಮಗುವನ್ನು ಎತ್ತಿಕೊಳ್ಳುತ್ತಾಳೆ.'' *(ಶ್ರೀರಾಮಕೃಷ್ಣ ವಚನವೇದ, ಭಾಗ೧, ಪು೧)*

ಈ ಬಗೆಯ ವ್ಯಾಕುಲತೆ, ಭಗವಂತನ ಮೇಲೆ ಅನುರಾಗ, ಶ್ರದ್ಧಾಭಕ್ತಿಗಳು ಉಂಟಾದಾಗ ವೈರಾಗ್ಯವೂ ಮೂಡಿಬರುವುದು. ಪ್ರಾಪಂಚಿಕತೆ, ವಿಷಯಸುಖ, ಇಂದ್ರಿಯಲೋಲುಪತೆ ಕಡಿಮೆಯಾಗುವುದು. ಅಂದರೆ, ವೈರಾಗ್ಯ ತಾಳಿ ಎಲ್ಲವನ್ನೂ ಬಿಟ್ಟುಬಿಡಬೇಕೆ? — ಎಲ್ಲರಿಗೂ ಪ್ರಪಂಚ ತ್ಯಾಗ ಸಾಧ್ಯವಾಗುವುದಿಲ್ಲ. ಆದರೆ ಭಗವಂತನ ಸಾಕ್ಷಾತ್ಕಾರ ಕೇವಲ ವೈರಾಗ್ಯ ತಾಳಿ ಪ್ರಪಂಚವನ್ನು ತ್ಯಜಿಸಿದ ಸಂನ್ಯಾಸಿಗಳಿಗೆ ಮಾತ್ರವೆ? ಖಂಡಿತ ಅಲ್ಲ. ಭಗವಂತನ ಸಾಕ್ಷಾತ್ಕಾರ ಎಲ್ಲ ಮಾನವರ ಗುರಿ. ಎಲ್ಲರಿಗೂ ಅದು ಸಾಧ್ಯ. ಆದರೆ, ಇನ್ನೂ ಪ್ರಪಂಚ ತ್ಯಾಗ ಮಾಡದ, ಲೌಕಿಕ ಜೀವನದಲ್ಲೇ ಮಗ್ನರಾಗಿರುವವರ ಗತಿಯೇನು? ಅವರಿಗಾಗಿ ಕೂಡ ಶ್ರೀರಾಮಕೃಷ್ಣರು ಹೇಳುತ್ತಾರೆ — ಪ್ರಪಂಚದಲ್ಲಿದ್ದುಕೊಂಡೇ ಭಗವಂತನ ಸಾಕ್ಷಾತ್ಕಾರಕ್ಕಾಗಿ ಸಾಧನೆ ಮಾಡಬಹುದು. ಸಂಸಾರದಲ್ಲಿದ್ದೂ ಸಾಧನೆ ಮಾಡುವುದನ್ನು ಶ್ರೀರಾಮಕೃಷ್ಣರು 'ಕೋಟೆಯೊಳಗಿದ್ದುಕೊಂಡೇ ಯುದ್ಧ ಮಾಡಿದಂತೆ' (ಅಂದರೆ ಸುರಕ್ಷಿತವಾಗಿ ಸಾಧನೆ ಮಾಡಬಹುದು) ಎನ್ನುತ್ತಾರೆ.

ಎಲ್ಲರಿಗೂ ಭಗವಂತನ ಸಾಕ್ಷಾತ್ಕಾರ ಸಾಧ್ಯ ಹಾಗೂ ಪ್ರತಿಯೊಬ್ಬರೂ ಭಗವಂತನ ದರ್ಶನ ಪಡೆಯಬೇಕು ಎಂಬ ಶ್ರೀರಾಮಕೃಷ್ಣರ ಉಪದೇಶಗಳು ಪ್ರಪಂಚದ ಪ್ರತಿಯೊಬ್ಬ ಮಾನವನಿಗೂ ಮಹಾನ್ ಆದರ್ಶವನ್ನು ಸಾಧಿಸಲು ನೀಡಿದ ಅತ್ಯುತ್ತಮ ಅವಕಾಶವಾಗಿ ಕಂಡುಬರುತ್ತದೆ. ಇದಕ್ಕೆ ಶ್ರೀರಾಮಕೃಷ್ಣರು ತೋರಿಸಿಕೊಟ್ಟ ಸಾಧನೆಯ ಮಾರ್ಗ ಅತ್ಯಂತ ಕ್ರಿಯಾಶೀಲವಾದ ಮಾರ್ಗ; ಪ್ರಪಂಚದಲ್ಲಿದ್ದುಕೊಂಡೇ ದೇವರನ್ನು ಕಾಣಬಹುದಾದ ವಿಧಾನ.

ಶ್ರೀರಾಮಕೃಷ್ಣರು ಹೇಳುತ್ತಾರೆ: ''ಎಲ್ಲಾ ಕೆಲಸಕಾರ್ಯಗಳನ್ನೂ ಮಾಡು, ಆದರೆ ಮನಸ್ಸನ್ನು ಮಾತ್ರ ಭಗವಂತನ ಪಾದಪದ್ಮಗಳಲ್ಲಿ ಇಡು. ಎಲ್ಲರೊಡನೆ, ಎಂದರೆ ಹೆಂಡತಿ, ಮಕ್ಕಳು, ತಂದೆ, ತಾಯಿ ಇವರೊಡನೆ ಇರು. ಅವರ ಸೇವೆ ಮಾಡು. ಅವರೆಲ್ಲಾ ನಿನ್ನ ಪರಮ ಆಪ್ತರೆಂದೇ ಕಾಣು; ಆದರೆ ಅವರಾರೂ ನಿನಗೆ ಸೇರಿದವರಲ್ಲ ಎಂಬುದು ನಿನ್ನ ಹೃದಯಾಂತರಾಳದಲ್ಲಿ ನೆಲಸಿರಲಿ.'' *(ಅಲ್ಲೇ, ಪು.೭)*

ಇದಕ್ಕನುಗುಣವಾಗಿ, ಭಗವಂತನಲ್ಲಿ ಪ್ರಾರ್ಥನೆ, ವ್ಯಾಕುಲತೆಯಿಂದ ಅವನೊಂದಿಗೆ ಮಾತನಾಡುವುದು, ಭಗವಂತನ ನಾಮಸ್ಮರಣೆ ಹಾಗೂ ಜಪ — ಇತ್ಯಾದಿಗಳನ್ನೂ ಮಾಡಬೇಕೆಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಸಂಸಾರದಲ್ಲಿದ್ದುಕೊಂಡು ಭಗವಂತನನ್ನು ಕಾಣಬಹುದೆಂದು ಶ್ರೀರಾಮಕೃಷ್ಣರು ಸಂಸಾರಿಗಳಿಗೆ ಭರವಸೆ ಕೊಡುತ್ತಾರೆ ನಿಜ, ಆದರೆ ಅವರು ಸಾಧನೆ ಮಾಡಬೇಕು, 'ಆಳವಾಗಿ ಮುಳುಗಬೇಕು', ಕೇವಲ ಉದಾಸೀನರಾಗಿದ್ದರೆ ಸಾಧ್ಯವಿಲ್ಲ ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ.

ಮಾನವನು ಜೀವನದಲ್ಲಿ ಭಕ್ತಿ, ವೈರಾಗ್ಯ ತಾಳುವುದೆಂದರೆ ಅದೊಂದು ಬಗೆ ಗೋಳು ಎಂಬುದಾಗಿ ಹಲವರು ಭಾವಿಸುತ್ತಾರೆ. ಆದರೆ ಇದಕ್ಕೆ ತೀರ ವಿರುದ್ಧವಾದುದು ನಿಜವಾದ ಆಧ್ಯಾತ್ಮಿಕ ಜೀವನ ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಅಖಂಡ ಚೈತನ್ಯ ಸ್ವರೂಪನಾದ ಪರಮಾತ್ಮನನ್ನು ಚಿಂತಿಸಿ ಚೈತನ್ಯಹೀನನಾಗಲು ಹೇಗೆ ಸಾಧ್ಯ? ಎಲ್ಲ ಆನಂದಗಳ ಘನೀಭೂತ ಮೂರ್ತಿಯಾದ ಸಚ್ಚಿದಾನಂದನನ್ನು ಧ್ಯಾನಿಸುವವನಿಗೆ ಹೇಗೆ ದುಃಖವುಂಟಾಗಲು ಸಾಧ್ಯ? — ಎನ್ನುತ್ತಾರೆ. ಸ್ವತಃ ಶ್ರೀರಾಮಕೃಷ್ಣರೇ ನಿರಂತರ ಉತ್ಸಾಹದ ಚಿಲುಮೆಯಾಗಿದ್ದರು; ಸದಾ ಆನಂದದಿಂದ ನಗುನಗುತ್ತ ಓಡಾಡುತ್ತಿದ್ದರು. ಅವರು ಆಗಾಗ ಸಮಾಧಿಯ ಅವಸ್ಥೆಗೇರಿದಾಗಲಂತೂ ಅವರ ದೇಹದ ಪ್ರತಿಯೊಂದು ರೋಮವೂ ಆನಂದದ ಪರಾಕಾಷ್ಠೆಯಿಂದ ಎದ್ದು ನಿಲ್ಲುತ್ತಿತ್ತು! ಶ್ರೀರಾಮಕೃಷ್ಣರು ಹೇಳುವಂತೆ ಮಾನವನು ಸದಾ ಭಗವಂತನ ಚಿಂತನೆ, ಪ್ರಾರ್ಥನೆ ಮಾಡುತ್ತಲೇ ಎಲ್ಲ ಕೆಲಸಕಾರ್ಯಗಳನ್ನು ಮಾಡಬೇಕು; ಸಾಕ್ಷಾತ್ಕಾರಕ್ಕಾಗಿ ಪ್ರಯತ್ನಿಸಬೇಕು. 'ಮುಂದೆ ಹೋಗು, ನಿಲ್ಲಬೇಡ' ಎಂಬುದೇ ಅವರ ಧೋರಣೆ. ''ಬದುಕಿರುವ ತನಕವೂ ಕಲಿಯುತ್ತಾ ಹೋಗು'' ಎನ್ನುತ್ತಾರೆ ಅವರು. ಜೀವನದುದ್ದಕ್ಕೂ ಕ್ರಿಯಾಶೀಲತೆಯ, ಜೀವಂತಿಕೆಯ ಉತ್ಸಾಹ ನಮ್ಮಲ್ಲಿರಬೇಕು ಎಂಬ ಆಶಯ ಅವರ ಮಾತುಗಳಲ್ಲಿವೆ.

### ಸಾಮರಸ್ಯ, ಸಮತೋಲನ

ಮಾನವನ ಬದುಕಿಗೆ ಸಾಮರಸ್ಯ ಮತ್ತು ಸಮತೋಲನ ಎಷ್ಟು ಮುಖ್ಯವೆಂಬುದನ್ನು ಶ್ರೀರಾಮಕೃಷ್ಣರು ಹಲವು ಕಡೆ ತೋರಿಸಿಕೊಡುತ್ತಾರೆ. 'ಎಲ್ಲ ಮತ-ಧರ್ಮಗಳೂ ಸತ್ಯ, ಅವೆಲ್ಲ ಭಗವಂತನನ್ನು ಕಾಣುವ ವಿವಿಧ ಮಾರ್ಗಗಳು' ಎಂಬ ಅವರ ಪ್ರಸಿದ್ಧ ಉಪದೇಶವು, ಮಾನವನು ತನ್ನ ಎಲ್ಲ ಭಿನ್ನಾಭಿಪ್ರಾಯ, ಮತೀಯ ಕಲಹ, ದ್ವೇಷ ಭಾವನೆ ಇತ್ಯಾದಿಗಳನ್ನು ಮರೆತು, ಮಾನವರೆಲ್ಲರೂ ಒಂದೇ ಗುರಿಯತ್ತ ಸಾಗುವ ಸಹ ಯಾತ್ರಿಕರಂತೆ ಬದುಕಲು ನೆರವಾಗುವುದು. ನಿಜವಾಗಿ ನೋಡಿದರೆ, ಎಲ್ಲ ಮತೀಯ ಕಲಹಗಳು ಮತ್ತು ಮತಾಂಧ ಭಾವನೆಗಳು ಭಗವಂತನ ದರ್ಶನಕ್ಕೆ ಬಹುದೊಡ್ಡ ಅಡಚಣೆಯಾಗಿವೆ. ಸುತ್ತಮುತ್ತ ಅಶಾಂತಿಯ ಪರಿಸರದಲ್ಲಿ ವಾಸಿಸುವ ವ್ಯಕ್ತಿ ಭಗವಂತನಿಗಾಗಿ ಸಾಧನೆ ಮಾಡಲು ಸಾಧ್ಯವಾಗುವುದೆ? ಇತರ ಮತ, ಧರ್ಮ, ತತ್ತ್ವಗಳನ್ನು ದ್ವೇಷಿಸುವ ವ್ಯಕ್ತಿಯ ಅಂತರ್ಯದಲ್ಲಿ ದ್ವೇಷ ಭಾವನೆ ತುಂಬಿರುವುದಲ್ಲದೆ ಭಗವತ್ಪ್ರೇಮ ತುಂಬಲು ಸಾಧ್ಯವೆ? — ಈ ಎಲ್ಲ ಸಮಸ್ಯೆಗಳಿಗೆ ಉತ್ತರ ಶ್ರೀರಾಮಕೃಷ್ಣರ ಸಾಮರಸ್ಯದ ಆದರ್ಶದಲ್ಲಿದೆ.

ಜೀವನವೇ ಹಲವು ಏರುಪೇರುಗಳ ಒಂದು ಗೊಂದಲ; ಏರಿಳಿತಗಳಿಂದ ಕೂಡಿದ ಕಡಲು. ಆದರೆ ಇದರಲ್ಲಿ ಆನಂದದಿಂದ ಸಲೀಸಾಗಿ ಈಜಬಲ್ಲವನು ಸಮತೋಲನವನ್ನು ಅರಿತ, ನುರಿತ ಈಜುಗಾರ. ದ್ವಂದ್ವಗಳನ್ನು ಮೀರಿ ಸಮತ್ವವನ್ನು, ಏಕತೆಯನ್ನು ಕಂಡುಕೊಳ್ಳಬಲ್ಲವನೇ ಇಂಥ ಈಜುಗಾರ. ಶ್ರೀರಾಮಕೃಷ್ಣರು

ತಮ್ಮ ಉಪದೇಶಗಳುದ್ದಕ್ಕೂ ಬೋಧಿಸುವುದು ಇಂಥ ಸಮತೋಲನವನ್ನು. ಧಾರ್ಮಿಕ ಸಮನ್ವಯದಂತೆಯೇ ತಾತ್ತ್ವಿಕ ಸಾಮರಸ್ಯ, ಲೌಕಿಕ-ಆಧ್ಯಾತ್ಮಿಕ ಸಾಮರಸ್ಯ, ಸಂಸಾರ-ಸಂನ್ಯಾಸ ಜೀವನದ ಸಮನ್ವಯ, ಭಕ್ತಿ-ಜ್ಞಾನಗಳ ಸಮನ್ವಯ ಹೀಗೆ ಎಲ್ಲೆಡೆ ಅದ್ಭುತವಾದ ಸಮತೋಲನವನ್ನು ಅವರು ಸಾಧಿಸಿದ್ದರು. ತಮ್ಮ ಶಿಷ್ಯಂದಿರಿಗೆ ಕೂಡ ಅವರು ಈ ಬಗೆಯ ಸಮತೋಲನವನ್ನು ಜೀವನದಲ್ಲಿ ಕಾಣಬೇಕೆಂದು ಬೋಧಿಸಿದರು. ಸ್ವಾಮಿ ಯೋಗಾನಂದರ ಮೃದುಸ್ವಭಾವಕ್ಕೆ ಕಾಠಿಣ್ಯವನ್ನು ಬೋಧಿಸಿದ್ದು ಹಾಗೂ ಕಠಿಣ ಸ್ವಭಾವದ ನಿರಂಜನಾನಂದರಿಗೆ ಮೃದುತ್ವವನ್ನು ಬೋಧಿಸಿದ್ದು ಇದಕ್ಕೆ ಅತ್ಯುತ್ತಮ ಉದಾಹರಣೆ.

ಪರಬ್ರಹ್ಮನನ್ನು ಒಪ್ಪಿಕೊಂಡರೆ ಪ್ರಪಂಚವನ್ನು ಒಪ್ಪಿಕೊಳ್ಳಬೇಕಾಗುತ್ತದೆ; ಇಲ್ಲದಿದ್ದರೆ 'ತೂಕ ಕಡಿಮೆ ಬೀಳುತ್ತದೆ' ಎನ್ನುತ್ತಿದ್ದರು ಶ್ರೀರಾಮಕೃಷ್ಣರು. ಪರಮಾತ್ಮ ಪೂರ್ಣನಾಗಿದ್ದರೆ ಅವನು ಸರ್ವವ್ಯಾಪಿ, ಸರ್ವಾಂತರ್ಯಾಮಿಯಾಗಿರಬೇಕು. ಎಲ್ಲೆಡೆ ಅವನು ನೆಲೆಸಿದ್ದರೆ ಅವನು ಪ್ರಪಂಚದ ಕಣಕಣದಲ್ಲೂ ಇರಲೇಬೇಕು. ಆದ್ದರಿಂದ ಯಾವುದನ್ನೂ ತ್ಯಜಿಸುವ ಅಗತ್ಯವಿಲ್ಲ ಎನ್ನುತ್ತಾರೆ. ಈ ಬಗೆಯ ದೃಷ್ಟಿಕೋನವನ್ನು ಅವರು 'ವಿಜ್ಞಾನ'ವೆನ್ನುತ್ತಾರೆ; ಅದನ್ನು ತಿಳಿದವನೇ 'ವಿಜ್ಞಾನಿ' ಹಾಗೂ ಅವನ ಅವಸ್ಥೆಯೇ 'ವಿಜ್ಞಾನಿ'ಯ ಅವಸ್ಥೆ. ಆಧ್ಯಾತ್ಮಿಕ ಅನುಭವಗಳ ಇತಿಹಾಸದಲ್ಲಿ ಇದು ಶ್ರೀರಾಮಕೃಷ್ಣರು ಕಂಡ ಒಂದು ವಿಶಿಷ್ಟ ದೃಷ್ಟಿಕೋನವಾಗಿದೆ.

### ದಯೆ, ಸಹಾನುಭೂತಿ, ಸೇವೆ

ಪ್ರಪಂಚದಲ್ಲಿ ಜೀವಿಸುವ ಮಾನವನು ತನ್ನ ಗುರಿ, ಆದರ್ಶಗಳನ್ನು ಸಾಧಿಸುವುದೇನೋ ಮುಖ್ಯ. ಆದರೆ ಅವರು ತನ್ನೊಂದಿಗೆ ಬದುಕುತ್ತಿರುವ ಇತರರೊಂದಿಗೆ ಯಾವ ಬಗೆಯ ಸಂಬಂಧವನ್ನು ಹೊಂದಿರಬೇಕು? — ಶ್ರೀರಾಮಕೃಷ್ಣರ ಪ್ರಕಾರ ಪ್ರತಿಯೊಬ್ಬ ಮಾನವನ ಅಂತರಂಗದಲ್ಲಿ ಸಾಕ್ಷಾತ್ ಭಗವಂತನೇ ನೆಲೆಸಿದ್ದಾನೆ. ಅವರೇ ಹೇಳುವಂತೆ, 'ಮನುಷ್ಯನ ಹೃದಯವೇ ಭಗವಂತನ ಬೈಠಕ್‌ಖಾನೆ.' ಅಂದರೆ, ಯಜಮಾನ ಮನೆಯ ಎಲ್ಲೆಡೆ ಇರಬಲ್ಲ; ಆದರೆ ಅವನು ಹೆಚ್ಚಾಗಿ ತನ್ನ ಬೈಠಕ್‌ಖಾನೆಯಲ್ಲಿ ಸಿಗುತ್ತಾನೆ. ಅದೇ ರೀತಿ, ಭಗವಂತ ಸರ್ವಾಂತರ್ಯಾಮಿಯಾಗಿದ್ದರೂ, ಮಾನವನ ಹೃದಯದಲ್ಲಿ ಅವನು ವಿಶೇಷವಾಗಿ ನೆಲೆಸಿದ್ದಾನೆ. ಆದ್ದರಿಂದ ಈ ಸತ್ಯವನ್ನು ಅರಿತು, ಮಾನವನಲ್ಲಿ ನೆಲೆಸಿರುವ ಭಗವಂತನ ಸೇವೆ ಮಾಡಬೇಕು. ಹೀಗೆ ಸೇವೆ ಮಾಡುವುದನ್ನೇ ಅವರು '**ಶಿವಜ್ಞಾನೇ ಜೀವಸೇವಾ**' ಎಂದು ಕರೆದರು. ಅಂದರೆ, ಪ್ರತಿಯೊಬ್ಬ ಮಾನವನಲ್ಲೂ ಶಿವನೇ ನೆಲೆಸಿದ್ದಾನೆ ಎಂಬ ಅರಿವಿನಿಂದ ಪ್ರತಿಯೊಬ್ಬ ಜೀವಿಯ, ಮಾನವನ ಸೇವೆ ಮಾಡಬೇಕು ಎನ್ನುತ್ತಾರೆ. ಆದ್ದರಿಂದ ಒಬ್ಬ ಜೀವಿ ಇನ್ನೊಬ್ಬನಿಗೆ ಸಹಾನುಭೂತಿ, ದಯೆ ತೋರಿಸುವುದು ತರವಲ್ಲ; ಏಕೆಂದರೆ ದಯೆ ತೋರಿಸುವ ತಾನು ಶ್ರೇಷ್ಠ, ದಯೆಗೆ ಪಾತ್ರನಾಗುವವನು ಕನಿಷ್ಠ ಎಂಬ ಭಾವನೆ ಅಲ್ಲಿರುತ್ತದೆ. ಆದ್ದರಿಂದ ಇನ್ನೊಬ್ಬ ಜೀವಿ ಭಗವಂತನೇ ಆಗಿದ್ದರೆ, ಅವನಿಗೆ ನೀನು ಸೇವೆಯನ್ನಷ್ಟೇ ಮಾಡಬಲ್ಲೆ — ಎನ್ನುತ್ತಾರೆ ಶ್ರೀರಾಮಕೃಷ್ಣರು. ಅವರ ಈ ಮಾತಿನ ಅಂತರಾರ್ಥವನ್ನು ಸಮರ್ಥವಾಗಿ ಗ್ರಹಿಸಿ, ವಿಶ್ಲೇಷಿಸಿ ಜಗತ್ತಿಗೆ ತಿಳಿಯಪಡಿಸಿದ ಅವರ ಶಿಷ್ಯಾಗ್ರಣಿ ಸ್ವಾಮಿ ವಿವೇಕಾನಂದರು, ಈ ತತ್ತ್ವ ಆದರ್ಶದ ಆಧಾರದಲ್ಲಿಯೇ ಕರ್ಮ, ಜ್ಞಾನ, ಭಕ್ತಿ — ಈ ಎಲ್ಲ ಯೋಗಗಳನ್ನು ಅನುಷ್ಠಾನಕ್ಕೆ ತರಬಹುದು ಎನ್ನುತ್ತಾರೆ. ಜೀವ ಹಾಗೂ ಪರಬ್ರಹ್ಮ ಇವುಗಳ ಐಕ್ಯವನ್ನು ಸಾಧಿಸುವ ಅದ್ವೈತ ವೇದಾಂತದ ತತ್ತ್ವವೇ ಶ್ರೀರಾಮಕೃಷ್ಣರ ಈ ತತ್ತ್ವಕ್ಕೆ ತಳಹದಿಯೆಂಬುದನ್ನೂ ಸ್ವಾಮೀಜಿ ತಿಳಿಸಿಕೊಡುತ್ತಾರೆ. ಈ ತತ್ತ್ವವನ್ನು ಆಧರಿಸಿಯೇ ಅವರು ರಾಮಕೃಷ್ಣ ಮಠ-ಮಿಷನ್ನಿನ ಧ್ಯೇಯ, ಆದರ್ಶಗಳನ್ನು ರೂಪಿಸಿದರು; ಅದಕ್ಕೆ ಅನುಸಾರವಾಗಿಯೇ ಶ್ರೀರಾಮಕೃಷ್ಣರ ಅನುಯಾಯಿಗಳಿಗೆ ಹೊಸ ದಿಕ್ಕಿನಲ್ಲಿ ಕಾರ್ಯವನ್ನು ಮಾಡಲು ಚಾಲನೆ ನೀಡಿದರು.

### ಸಾರ ಮಾತ್ರ ಮುಖ್ಯ

''ಮಾವಿನ ತೋಟಕ್ಕೆ ನೀನು ಬಂದಿರುವುದು ಹಣ್ಣು ತಿನ್ನಲು. ಎಲೆಗಳನ್ನೇ ಎಣಿಸುತ್ತ ಹೋದರೆ ನಿನ್ನ ಜೀವನ ಅದರಲ್ಲೇ ಮುಗಿದು ಹೋಗುವುದು'' ಎನ್ನುತ್ತಾರೆ ಶ್ರೀರಾಮಕೃಷ್ಣರು. ಸಾರವಸ್ತುವಾದ ಭಗವಂತನೇ ಮಾವಿನ ಹಣ್ಣಿನಂತೆ. ಅದನ್ನು ಸಾಧಿಸುವುದನ್ನು ಬಿಟ್ಟು ಮಾನವನು ಪ್ರಾಪಂಚಿಕವಾದ ನಾನಾ ವ್ಯವಹಾರಗಳಲ್ಲೇ ಮುಳುಗಿಹೋಗಿದ್ದಾನೆ. ಆದ್ದರಿಂದ ಅವನ ಜೀವನವೆಲ್ಲ 'ಎಲೆಗಳನ್ನು ಎಣಿಸಿದಂತೆ' ಕೆಲಸಕ್ಕೆ ಬಾರದ ಹಲವು ವ್ಯವಹಾರಗಳಿಂದ ವ್ಯರ್ಥವಾಗುವುದು ಎನ್ನುತ್ತಾರೆ. ಅವರು ಪದೇ ಪದೇ ಎಚ್ಚರಿಸುವ ವಿಶೇಷವಾದ ಮಾತಿದು — ಸಾರವನ್ನು ಅರಿತುಕೋ, ತಿರುಳನ್ನು ಮಾತ್ರ ತೆಗೆದುಕೋ. ಜೀವನದ ಯಶಸ್ಸಿನ ರಹಸ್ಯವಿರುವುದೇ ಇಲ್ಲಿ. ಮಾನವನ ಜೀವನಾವಧಿ ಅಲ್ಪಕಾಲ ಮಾತ್ರ ; ಆದರೆ ಅದು ಅತ್ಯಮೂಲ್ಯ. ಪ್ರಯತ್ನಿಸಿದರೆ ಭಗವಂತನನ್ನೇ ಕಾಣಬಹುದು, ಅವನಲ್ಲಿ ಒಂದಾಗಬಹುದು. ಶಾಶ್ವತನೂ, ಅನಂತನೂ ಎಲ್ಲ ಆನಂದದ ಮೂಲವೂ ಆದ ಅವನನ್ನು ಹೊಂದುವುದಕ್ಕೆ ಮಿಗಿಲಾದ ಸೌಭಾಗ್ಯ ಮಾನವನಿಗೆ ಇನ್ನೇನಿದೆ? ಆದ್ದರಿಂದ ಜೀವನದ ಸಾರವನ್ನು ಅರಿತುಕೋ — ಅದು ಭಗವಂತನ ಸಾಕ್ಷಾತ್ಕಾರ ಎನ್ನುತ್ತಾರೆ ಶ್ರೀರಾಮಕೃಷ್ಣರು. ❖

**ನವೆಂಬರ್ ತಿಂಗಳ ಕಾರ್ಯಕ್ರಮಗಳು**

| | | |
|---|---|---|
| ೧೧ | ಬುಧವಾರ | ಏಕಾದಶಿ |
| ೧೪ | ಶನಿವಾರ | ಶ್ರೀ ಶ್ರೀ ಕಾಳೀಪೂಜೆ |
| ೨೫ | ಬುಧವಾರ | ಏಕಾದಶಿ |
| ೨೭ | ಶುಕ್ರವಾರ | ಸ್ವಾಮಿ ಸುಬೋಧಾನಂದ ಜಯಂತಿ |
| ೨೯ | ಭಾನುವಾರ | ಸ್ವಾಮಿ ವಿಜ್ಞಾನಾನಂದ ಜಯಂತಿ |